O.S.No.453/2013
DW -1

ದಿನಾಂಕ 18/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆ :- ಶ್ರೀ ಹೆಚ್.ಟಿ.ಟಿ. ಪ್ರತಿವಾದಿ ಪರ ವಕೀಲರಿಂದ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲವೂ ಸತ್ಯವಾಗಿದೆ, ಹಾಗೂ ಸದರಿ ಪ್ರಮಾಣ ಪತ್ರಕ್ಕೆ ನಾನೇ ತಿಳಿದು ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಾನು ಈ ದಿನ ದಿ. 30/05/2022 ರ ಕ್ರಯ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು, ದಿ.13/08/1992 ಇದರ ಕ್ರಯ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ 2 ಎಂದು, ದಿ.28/12/2010 ರ ಕ್ರಯ ಪತ್ರ ಹಾಜರುಪಡಿಸಿದ್ದು ಅದನ್ನು ನಿಡಿ -3 ಎಂದು, ಅಸೆಸ್ ಮೆಂಟ್ ಸಂಖ್ಯೆ-236/1 ಇದರ ತೆರಿಗೆ ಬೇಡಿಕೆಯ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-4 ಎಂದು, 2 ಕಂದಾಯ ರಸೀದಿಗಳನ್ನು ಹಾಜರುಡಿಪಸಿದ್ದು ಅವುಗಳನ್ನು ನಿಡಿ-5 ಮತ್ತು ನಿಡಿ-6 ಎಂದು, ಮೂಲ ದಾವೆ ಸಂಖ್ಯೆ-151/2002 ಇದರ ತೀರ್ಪಿನ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-7 ಎಂದು, ಮೂಲ ದಾವೆ ಸಂಖ್ಯೆ-176/2006 ಇದರ ವಾದ ಪತ್ರದ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-8 ಎಂದು, ಮೂಲ ದಾವೆ ಸಂಖ್ಯೆ-176/2006 ಇದರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ9 ಮತ್ತು ನಿಡಿ-10 ಎಂದು, ಆರ್ ಎ.39/2013 ಇದರ ಆದೇಶ ಪುಟ ಹಾಗೂ ಮೇಲ್ಮನವಿಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ11 ಮತ್ತು ನಿಡಿ-12 ಎಂದು, ಒಂದು ತೆರಿಗೆ ಬೇಡಿಕೆಯ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-13 ಎಂದು ಗುರುತಿಸಲಾಯಿತು.

ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಗಣಿಸಿ ದಾವೆಯನ್ನು ವಜಾಗೊಳಿಸಬೇಕಾಗಿ ಕೋರುತ್ತೇನೆ.

( ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು)

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ